ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	37 (84)
2	ಸದಸ್ಯರ ಹೆಸರು	:	ಶ್ರೀ. ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	:	15-02-2022
4	ಉತ್ತರಿಸುವ ಸಚಿವರು	:	ನಗರಾಭಿವೃದ್ಧಿ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಗದಗ-ಬೆಟಗೇರಿ ನಗರದ 24/7 ಕುಡಿಯುವ ನೀರಿನ ಯೋಜನೆ ಯಾವಾಗ ಪ್ರಾರಂಭವಾಗಿದೆ; ಕಾಮಗಾರಿ ಪೂರ್ಣಗೊಳಿಸಲು ನಿಗದಿ ಪಡಿಸಿದ ಅವಧಿ ಎಷ್ಟು?</td><td>ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್.ಕೆ.ಯು.ಎಸ್.ಐ.ಪಿ) ಗದಗ-ಬೆಟಗೇರಿ ನಗರದ 24/7 ಕುಡಿಯುವ ನೀರಿನ ಯೋಜನೆ ದಿನಾಂಕ 24-12-2014 ರಲ್ಲಿ ಪ್ರಾರಂಭವಾಗಿದೆ.

ಗುತ್ತಿಗೆ ಅವಧಿ 30 ತಿಂಗಳು, ಅಂದರೆ, 23-06-2017 ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ. ಹೆಚ್ಚುವರಿ ಕಾಮಗಾರಿಯ ಪರಿಮಾಣಗಳ ಕಾರಣಗಳಿಂದ ಹಾಗೂ ಗುತ್ತಿಗೆದಾರರ ವಿಳಂಬದಿಂದ ಗುತ್ತಿಗೆ ಅವಧಿಯನ್ನು 9 ಬಾರಿ ವಿಸ್ತರಿಸಲಾಗಿದೆ. ದಿನಾಂಕ 31-03-2022ರೊಳಗೆ ಕಾಮಗಾರಿ ಸಂಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.</td></tr>
<tr><td>ಆ)</td><td>ಈ ಯೋಜನೆಯ ಕಾಮಗಾರಿಯು ಸದ್ಯ ಯಾವ ಹಂತದಲ್ಲಿದೆ; ಪೂರ್ಣಗೊಳಿಸಲು ಇನ್ನು ಬೇಕಾಗುವ ಕಾಲಾವಕಾಶವೆಷ್ಟು?</td><td>ಗದಗ-ಬೆಟಗೇರಿ ನಗರದ 24/7 ಕುಡಿಯುವ ನೀರಿನ ಯೋಜನೆಯ ಪ್ರಗತಿ ವಿವರ ಈ ಕೆಳಕಂಡಂತಿದೆ:
<table>
<tr><th>ಘಟಕ</th><th>ಗುರಿ ವೇರಿಯೇಷನ್ ಸೇರಿ</th><th>ಸಾಧನೆ ವೇರಿಯೇಷನ್ ಸೇರಿ</th></tr>
<tr><td>HDPE ವಿತರಣ ಜಾಲದ ಪೈಪ್‌ಲೈನ</td><td>468.98 ಕಿ.ಮೀ</td><td>456.97 ಕಿ.ಮೀ</td></tr>
<tr><td>DI / HDPE ಫೀಡರ್ ಪೈಪ್‌ಲೈನ್</td><td>12.01 ಕಿ.ಮೀ</td><td>10.56 ಕಿ.ಮೀ</td></tr>
<tr><td>ಗೃಹ ನಳ ಸಂಪರ್ಕ</td><td>40578 ಸಂಖ್ಯೆ</td><td>37806 ಸಂಖ್ಯೆ</td></tr>
<tr><td>ಮೇಲ್ಮಟ್ಟದ ಜಲ ಸಂಗ್ರಹಗಾರ</td><td>05 ಸಂಖ್ಯೆ</td><td>04 ಸಂಖ್ಯೆ</td></tr>
<tr><td>ವಾಲ್ವ ಜೋಡಣೆ</td><td>1188 ಸಂಖ್ಯೆ</td><td>378 ಸಂಖ್ಯೆ</td></tr>
</table></td></tr>
</table>

ಕ್ರ. ಸಂ.	ಪ್ರಶ್ನೆಗಳು	ಉತ್ತರ
		ಗದಗ–ಬೆಟಗೇರಿ ನಗರವನ್ನು 14 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಈಗಾಗಲೇ 7 ವಲಯಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ದಿನಾಂಕ: 31–03–2022 ರವರೆಗೆ ಗಡುವು ನೀಡಲಾಗಿದೆ.
ಇ)	ಈ ಯೋಜನೆ ಕಾಮಗಾರಿಗೆ ಮಂಜೂರಾದ ಒಟ್ಟು ಹಣವೆಷ್ಟು; ಅದರಲ್ಲಿ ಗುತ್ತಿಗೆದಾರರಿಗೆ ಬಿಡುಗಡೆಯಾದ ಹಣ ಎಷ್ಟು?	ಗದಗ–ಬೆಟಗೇರಿ ನಗರದ 24/7 ಕುಡಿಯುವ ನೀರಿನ ಯೋಜನೆಯ ಮೂಲ ಗುತ್ತಿಗೆ ಮೊತ್ತ ರೂ.72.71 ಕೋಟಿ. ಮೂಲ ಗುತ್ತಿಗೆಯಲ್ಲಿ ಕೊಳವೆ ಉದ್ದದ್ದ ಪರಿಮಾಣ ಕೊರತೆ ಇದ್ದು ಹೆಚ್ಚುವರಿಯಾಗಿ 143 ಕಿಮೀ HDPE ಪೈಪ್ ಲೈನ್ ವಿತರಣ ಜಾಲ ಹಾಗೂ 6 ಕಿ.ಮೀ ಫೀಡರ್ ಮೈನ್ DI / HDPE ಮೇನ್ ಪೈಪ್‌ಲೈನ್ ಹೆಚ್ಚವರಿಯಾಗಿ ವೇರಿಯೇಷನ್ ಅನುಮೋದಿಸಲಾಗಿರುತ್ತದೆ. ಇದರಿಂದ ಗುತ್ತಿಗೆ ಮೊತ್ತವು ಪರಿಷ್ಕೃತಗೊಂಡು ರೂ.85.76 ಕೋಟಿಯಾಗಿರುತ್ತದೆ. ಇದುವರೆಗೆ ರೂ.71.76 ಕೋಟಿ ವೆಚ್ಚವಾಗಿರುತ್ತದೆ.
(ಈ)	ಗದಗ-ಬೆಟಗೇರಿ ನಗರದ ಒಳಚರಂಡಿ ಯೋಜನೆ ಯಾವಾಗ ಪ್ರಾರಂಭವಾಗಿದೆ; ಕಾಮಗಾರಿ ಪೂರ್ಣಗೊಳಿಸಲು ನಿಗದಿ ಪಡಿಸಿದ ಅವಧಿ ಎಷ್ಟು;	ಗದಗ-ಬೆಟಗೇರಿ ನಗರಕ್ಕೆ ಒಳಚರಂಡಿ ವ್ಯವಸ್ಥೆ ಅಳವಡಿಸುವ ಯೋಜನೆಯನ್ನು ಮೂರು ಹಂತಗಳಲ್ಲಿ ಅಂದರೆ 1ನೇ ಹಂತ, ಅಮೃತ್ ಯೋಜನೆಯಡಿ ಎರಡನೇ ಹಂತ ಹಾಗೂ ಅಮೃತ್ ಹೆಚ್ಚುವರಿ ಅನುದಾನದಡಿ ಪುನರುಜ್ಜೀವನಗೊಳಿಸುವ ಯೋಜನೆಗಳನ್ನು 3 ಹಂತದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ವಿವರ ಕೆಳಗಿನಂತಿವೆ. 1. ಗದಗ-ಬೆಟಗೇರಿ ನಗರದ 1ನೇ ಹಂತದ ಒಳಚರಂಡಿ ಯೋಜನೆ ದಿನಾಂಕ: 28.11.2003 ರಿಂದ ಪ್ರಾರಂಭ ಮಾಡಲಾಗಿತ್ತು. ಸದರಿ ಯೋಜನೆಯನ್ನು ಪೂರ್ಣಗೊಳಿಸಲು 2 ವರ್ಷಗಳ ಅವಧಿ ನಿಗದಿಗೊಳಿಸಲಾಗಿತ್ತು. 2. ಕೇಂದ್ರ ಪುರಸ್ಕೃತ ಅಮೃತ್ ಅಡಿ ನಗರಕ್ಕೆ 2ನೇ ಹಂತದ ಒಳಚರಂಡಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ಯೋಜನೆಯನ್ನು ದಿನಾಂಕ: 17.10.2016 ರಿಂದ ಪ್ರಾರಂಭವಾಗಿದೆ ಹಾಗೂ ಕಾಮಗಾರಿ ಪೂರ್ಣಗೊಳಿಸಲು 3 ವರ್ಷಗಳ ಅವಧಿ ನಿಗದಿಪಡಿಸಲಾಗಿರುತ್ತದೆ.

ಕ್ರ. ಸಂ.	ಪ್ರಶ್ನೆಗಳು	ಉತ್ತರ
		3. ಕೇಂದ್ರ ಪುರಸ್ಕೃತ ಅಮೃತ್ ಹೆಚ್ಚುವರಿ ಅನುದಾನ ಅಡಿ ನಗರದ ಹಾಲಿ ಇರುವ ಒಳಚರಂಡಿ ವ್ಯವಸ್ಥೆ ಪುನರುಜ್ಜೀವನಗೊಳಿಸುವ ಯೋಜನೆಯನ್ನು ದಿನಾಂಕ: 10.01.2019 ರಿಂದ ಪ್ರಾರಂಭವಾಗಿದೆ. ಸದರಿ ಯೋಜನೆಯನ್ನು ಪೂರ್ಣಗೊಳಿಸಲು 6 ತಿಂಗಳುಗಳ ಅವಧಿ ನಿಗದಿಗೊಳಿಸಲಾಗಿತ್ತು.
(ಉ)	ಈ ಯೋಜನೆಯ ಕಾಮಗಾರಿಯು ಯಾವ ಹಂತದಲ್ಲಿದೆ; ಇದನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಕಾಶ ಎಷ್ಟು;	1. ಗದಗ-ಬೆಟಗೇರಿ ನಗರದ 1ನೇ ಹಂತದ ಒಳಚರಂಡಿ ಯೋಜನೆಯಡಿ ಎಲ್ಲಾ ಕಾಮಗಾರಿಗಳನ್ನು ದಿನಾಂಕ: 30.03.2016 ರಂದು ಪೂರ್ಣಗೊಳಿಸಲಾಗಿರುತ್ತದೆ. 2. ಕೇಂದ್ರ ಪುರಸ್ಕೃತ ಅಮೃತ್ ಅನುದಾನದಡಿ ನಗರಕ್ಕೆ 2ನೇ ಹಂತದ ಒಳಚರಂಡಿ ಯೋಜನೆಯನ್ನು ದಿನಾಂಕ: 16.10.2019ಕ್ಕೆ ಪೂರ್ಣಗೊಳಿಸಿ, ದಿನಾಂಕ: 30.07.2021 ರಂದು ಭಾಗಶಃ ಚಾಲನೆ ಗೊಳಿಸಲಾಗಿರುತ್ತದೆ. ಹಾಗೂ ಯೋಜನೆಯಡಿ ಒಳಚರಂಡಿ ಕೊಳವೆಗಳನ್ನು ಕಾಶಿ ವಿಶ್ವನಾಥ ನಗರದಿಂದ ಹೊಸ ಬಸ್ ಸ್ಟ್ಯಾಂಡ್ ರಸ್ತೆ ವರೆಗೆ ಅಳವಡಿಸಲು, ಎ.ಪಿ.ಎಂ.ಸಿ. ಮತ್ತು ಕಾಟನ್ ಸೊಸೈಟಿ ಇವರಿಂದ ಅಡೆತಡೆ, ಭೀಷ್ಮ ಕೆರೆ ಹತ್ತಿರ ಅಳವಡಿಸಲು ಕೋರ್ಟ ತಡೆಯಾಜ್ಞೆ ಇರುತ್ತದೆ. ಕಾರಣ, ಸದರಿ ಸ್ಥಳಗಳಲ್ಲಿ ಕೊಳವೆಗಳನ್ನು ಅಳವಡಿಸಲು ಅನುಮತಿ ದೊರೆತ ನಂತರ, 6 ತಿಂಗಳಲ್ಲಿ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. 3. ಕೇಂದ್ರ ಪುರಸ್ಕೃತ ಅಮೃತ್ ಹೆಚ್ಚುವರಿ ಅನುದಾನ ಅಡಿ ನಗರದ ಹಾಲಿ ಇರುವ ಒಳಚರಂಡಿ ವ್ಯವಸ್ಥೆ ಪುನರುಜ್ಜೀವನಗೊಳಿಸುವ ಯೋಜನೆಯಡಿ ಎಲ್ಲಾ ಕಾಮಗಾರಿಗಳನ್ನು ದಿನಾಂಕ:26.12.2019 ರಂದು ಪೂರ್ಣಗೊಳಿಸಲಾಗಿರುತ್ತದೆ.
(ಊ)	ಒಳಚರಂಡಿ ಕಾಮಗಾರಿಗೆ ಮಂಜೂರಾದ ಒಟ್ಟು ಹಣವೆಷ್ಟು; ಅದರಲ್ಲಿ ಗುತ್ತಿಗೆದಾರರಿಗೆ ಬಿಡುಗಡೆಯಾದ ಹಣ ಎಷ್ಟು?	1. ಗದಗ-ಬೆಟಗೇರಿ ನಗರದ 1ನೇ ಹಂತದ ಒಳಚರಂಡಿ ಯೋಜನೆಗೆ ಮಂಜೂರಾದ ಮೊತ್ತ: ರೂ.1114.66 ಲಕ್ಷಗಳು ಪರಿಷ್ಕೃತ ಅಂದಾಜು ಮೊತ್ತ: ರೂ.1494.00 ಲಕ್ಷಗಳು ಮತ್ತು ಗುತ್ತಿಗೆದಾರರಿಗೆ ಬಿಡುಗಡೆಯಾದ ಮೊತ್ತ: ರೂ.1126.00 ಲಕ್ಷಗಳು.

ಕ್ರ. ಸಂ.	ಪ್ರಶ್ನೆಗಳು	ಉತ್ತರ
		2. ಕೇಂದ್ರ ಪುರಸ್ಕೃತ ಅಮೃತ್ ಅನುದಾನದಡಿ ನಗರಕ್ಕೆ 2ನೇ ಹಂತದ ಒಳಚರಂಡಿ ಯೋಜನೆಗೆ ಮಂಜೂರಾದ ಮೊತ್ತ: ರೂ.15006.00 ಲಕ್ಷಗಳು ಮತ್ತು ಗುತ್ತಿಗೆದಾರರಿಗೆ ಬಿಡುಗಡೆಯಾದ ಮೊತ್ತ: ರೂ. 15018.93 ಲಕ್ಷಗಳು. 3. ಕೇಂದ್ರ ಪುರಸ್ಕೃತ ಅಮೃತ್ ಹೆಚ್ಚುವರಿ ಅನುದಾನ ಅಡಿ ನಗರದ ಹಾಲಿ ಇರುವ ಒಳಚರಂಡಿ ವ್ಯವಸ್ಥೆ ಪುನರುಜ್ಜೀವನಗೊಳಿಸುವ ಯೋಜನೆಗೆ ಮಂಜೂರಾದ ಮೊತ್ತ : ರೂ.200.00 ಲಕ್ಷಗಳು ಮತ್ತು ಗುತ್ತಿಗೆದಾರರಿಗೆ ಬಿಡುಗಡೆಯಾದ ಮೊತ್ತ : ರೂ.129.92 ಲಕ್ಷಗಳು.

ಕಡತ ಸಂಖ್ಯೆ: ನಅಇ 28 ಪಿ.ಆರ್.ಜೆ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು